ಶ್ರೀಮತಿ ಬಿ. ಎಲ್. ಸುಬ್ಬಮ್ಮ .—ಆಹಾರ ಬೆಳೆಯಲು ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳುವಾಗ ಜನರೇ ಕೆರೆಗಳ ಹೂಳನ್ನು ತೆಗೆಯಬೇಕೆಂದರೆ ಅದಕ್ಕೆ ಧಕ್ಕೆ ಬರುವುದಿಲ್ಲವೇ ?

† ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದವರು ತಾವೇ ಸಾಧ್ಯವಾದಷ್ಟು ಸಿಲ್ಟ್ ತೆಗೆಸಬೇಕೆಂದು ಎರಡು ಮೂರು ಕಡೆ ಪ್ರಯತ್ನ ಮಾಡಿದ್ದಾರೆ, ಎಷ್ಟುಮಟ್ಟಿಗೆ ಅದರಿಂದ ಹೆಚ್ಚು ನೀರು ನಿಲ್ಲಲು ಸಾಧ್ಯವೆಂದು ನೋಡುತ್ತಿದ್ದಾರೆ. ಅದರಿಂದ ಅನುಕೂಲವಾದರೆ ಜನರಮೇಲೆ ಭಾರ ಹಾಕದೆ ಸರಕಾರವೇ ಹೆಚ್ಚು ಜವಾಬ್ದಾರಿ ವಹಿಸಬೇಕೆಂಬ ಉದ್ದೇಶವಿದೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರು ಕ್ಷಾಮ ನಿವಾರಣೆಗಾಗಿ ಒದಗಿಸುವ ಹಣದಲ್ಲಿ ಈ ಕೆಲಸ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಸಿಲ್ಟ್ ತೆಗೆಯುವ ಕೆಲಸವನ್ನು ರಿಲೀಫ್ ವರ್ಕ್ ಆಗಿ ತೆಗೆದು ಕೊಳ್ಳಬೇಕೆಂದು ಎಲ್ಲ ಜಿಲ್ಲಾಧಿಕಾರಿಗಳಿಗೂ ಆದೇಶ ಕೊಡಲಾಗಿದೆ.

———

Agricultural College for Hyderabad-Karnatak Area.

*Q.—182. Sri S. RUDRAPPA (Kalgi).—

Will the Government be pleased to state:—

whether there is any proposal of establishing a College of Agriculture in Hyderabad-Karnatak Area ?

A.—Sri H. C. BORAIAH (Parliamentary Secretary to Minister for Agriculture) —

The proposal is under consideration.

ಶ್ರೀ ಎಸ್. ರುದ್ರಪ್ಪ.—ಈ ವಿಷಯ ಎಷ್ಟು ವರ್ಷದಿಂದ ಪರಿಶೀಲನೆಯಲ್ಲಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಇತ್ತೀಚೆಗೆ ಮನವಿ ಬಂದಮೇಲೆ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಸ್. ರುದ್ರಪ್ಪ.—ಈ ವ್ಯವಸಾಯ ಕಾಲೇಜನ್ನು ಪ್ರಾರಂಭ ಮಾಡುವುದು ಯಾವಾಗ ?

ಶ್ರೀ ಎಚ್. ಸಿ. ಬೋರಯ್ಯ.—ಇದು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿರುವುದರಿಂದ ಅದರ ಅಭಿಪ್ರಾಯ ಪಡೆಯಬೇಕು, ಅದನ್ನು ತೆಗೆದುಕೊಂಡು ನಂತರ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂಥ ಒಂದು ಕಾಲೇಜನ್ನು ತೆರೆಯಬೇಕಾದರೆ ಸರ್ಕಾರ ಯಾವ ಯಾವ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳುವುದು ?

ಅಧ್ಯಕ್ಷರು.—ಅದಕ್ಕೆ ಹಣ ಬೇಕು ಮತ್ತು ಸರಿಯಾದ ಜಾಗ ಬೇಕು.

Sri C. J. MUCKANNAPPA.—May I know what steps you have taken to select a place in Hyderabad-Karnatak area to locate this college ?

ಶ್ರೀ ಎಚ್. ಸಿ. ಬೋರಯ್ಯ.—ಇನ್ನು ಯಾವ ಸ್ಥಳ ಗೊತ್ತುಮಾಡಬೇಕೆಂಬುದು ಪರಿಶೀಲನೆಯಲ್ಲಿದೆ.

ಶ್ರೀ ಜಿ. ವಿ. ಗೌಡ.—ಈಗ ವ್ಯವಸಾಯ ಕಾಲೇಜಿನಲ್ಲಿ ಪದವಿ ಪಡೆದಿರುವವರಿಗೆಲ್ಲಾ ಕೆಲಸ ಕೊಡಲು ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಒದಗಿಸಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಂಜನಿಯರಿಂಗ್, ಮೆಡಿಕಲ್ ಮುಂತಾದ ಟೆಕ್ನಿಕಲ್ ಕಾಲೇಜುಗಳನ್ನು ತೆರೆಯಲು ಜನರು ಮುಂದೆ ಬರುವಹಾಗೆ ವ್ಯವಸಾಯ ಕಾಲೇಜನ್ನೂ ತೆರೆಯಲು ಯಾರಾದರೂ ಮುಂದೆ ಬಂದಿರುವರೇ ?

ಶ್ರೀ ಎಚ್. ಸಿ. ಬೋರಯ್ಯ.—ಅದು ಈ ಪ್ರಶ್ನೆಗೆ ಬಹುಶಃ ಸಂಬಂಧ ಪಟ್ಟಿಲ್ಲ, ಬೇರೆ ಪ್ರಶ್ನೆ ಹಾಕಿದರೆ ಹೇಳಬಹುದು.

ಶ್ರೀಮತಿ ಬನವರರಾಜೇಶ್ವರಿ.—ವ್ಯವಸಾಯದ ಕಾಲೇಜನ್ನು ರಾಯಚೂರು ಜಿಲ್ಲೆಯಲ್ಲಿ ಸ್ಥಾಪಿಸಬೇಕೆಂಬ ಅಭಿಪ್ರಾಯ ಸರ್ಕಾರಕ್ಕಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಆಲೋಚನೆಯಲ್ಲಿದೆ. ಏಕೆಂದರೆ ಅದು ವ್ಯವಸಾಯದ ದೃಷ್ಟಿಯಿಂದ ಬಹಳ ಮುಖ್ಯವಾದ ಪ್ರದೇಶ.

ಶ್ರೀ ಎ. ಕೃಷ್ಣಶೆಟ್ಟಿ.—ಮಲೆನಾಡಿನಲ್ಲೂ ಒಂದು ವ್ಯವಸಾಯದ ಕಾಲೇಜನ್ನು ಸ್ಥಾಪಿಸಬೇಕಾದ್ದು ಅವಶ್ಯಕವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಈಗಾಗಲೆ ಅಲ್ಲಿ ಒಂದಿದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಜಿಲ್ಲೆಯಲ್ಲೂ ಒಂದು ವ್ಯವಸಾಯದ ಕಾಲೇಜನ್ನು ತೆರೆಯಬೇಕೆಂದು ಕೇಳುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸಾಧ್ಯವಾಗುವುದಿಲ್ಲ. ಆದರೆ ಸಾಧ್ಯವಾದ ಮಟ್ಟಿಗೆ ಎಲ್ಲ ಕಡೆಯೂ ಒಂದು ವ್ಯವಸಾಯಕ್ಕೆ ಸಂಬಂಧಪಟ್ಟ ಶಾಲೆ, ಓರಿಯೆಂಟೆಡ್ ಅಗ್ರಿಕಲ್ಚರಲ್ ಹೈಸ್ಕೂಲನ್ನು ತೆರೆಯಬೇಕೆಂಬ ಉದ್ದೇಶವಿದೆ,

---

Historical Monuments in North Kanara District.

*Q.—191. Sri S. P. PHAYADE (Ankola).—

Will the Government be pleased to state :—

(*a*) which are all the important historical monument in North Kanara District (Talukwise details may be furnished) ;

(*b*) whether they have got any archæological importance for preservation ;

(*c*) if so, what action has been taken to preserve and maintain the monuments ;

(*d*) what was the amount earmarked for the said purpose both by the State and Centre for the last three years (Details be furnished) ;

(*e*) what is the amount spent so far for this purpose during the said period (Details of each monument be furnished) ?

A.—Sri S. R. KANTHI (Minister for Education).—

(*a*) *Vide* Statement appended.

(*b*) Yes.

(*c*), (*d*) and (*e*) The Monuments have been declared as protected and are being maintained by the Central Government. No specific amounts appear to have been earmarked by the Centre for each monument.